# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

## ಬೈರಸಂದ್ರ , ಹೊಸ ವಾರ್ಡ್ ಸಂಖ್ಯೆ: 196 (ಹಳೆಯ ವಾರ್ಡ್ ಸಂಖ್ಯೆ: 168 & 169)

**ದಿನಾಂಕ:17.09.2022 ರಂದು ಹೊಸ ವಾರ್ಡ್ ಸಂಖ್ಯೆ 196 ಬೈರಸಂದ್ರ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆ:**

## -: ಸಮಿತಿ ಸಭೆಯ ನಡವಳಿಗಳು :-

ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ್ ಸಮಿತಿ ಸದಸ್ಯರು:-

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲು ರಾಥೋಡ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ಚಂದ್ರಶೇಖರ್ ವಿ | ಕಾರ್ಯದರ್ಶಿ ಮತ್ತು ಸಂಚಾಲಕರು |
| 03 | ಶ್ರೀ ರಾಮಚಂದ್ರ .ಸಿ | ಹಿರಿಯ ಆರೋಗ್ಯ-168 ನಿರೀಕ್ಷಕರು, ಬಿ.ಬಿ.ಎಂ.ಪಿ |
| 04 | ಶ್ರೀ ರಮೇಶ್ ವಿ ಬಿ | ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 05 | ಶ್ರೀ ನರೇಂದ್ರ ಬಾಬು | ಅರಣ್ಯ ಇಲಾಖೆ (ದಕ್ಷಿಣ) , ಬಿ.ಬಿ.ಎಂ.ಪಿ |
| 06 | ಶ್ರೀಮತಿ ಡಾ. ಹಲೀಮ್ ಸಾರ | MO-168, ಆರೋಗ್ಯ ಇಲಾಖೆ, ಬಿ.ಬಿ.ಎಂ.ಪಿ |
| 07 | ಡಾ. ಶರಣಪ್ಪ | MO-168, ಆರೋಗ್ಯ ಇಲಾಖೆ, ಬಿ.ಬಿ.ಎಂ.ಪಿ |
| 08 | ಶ್ರೀ ಮಧು.ಎನ್ | SWI ವಾರ್ಡ್ -168 |
| 09 | ಶ್ರೀ ಗೌತಮ್.ವೈ | SWI ವಾರ್ಡ್ -168 |
| 10 | ಶ್ರೀ ಮುರಳೀಧರ್ ಚವ್ಹಾಣ | ಸ.ಅ, BWSSB ಜಯನಗರ |
| 11 | ಶ್ರೀ ಹನುಮಂತಪ್ಪ | ಸ.ಅ, BWSSB ಜಯನಗರ |
| 12 | ಶ್ರೀ ಮಲ್ಲೇಶ್ ಜಿ.ಎಮ್ | ASI, ತಿಲಕ್‌ನಗರ ಪೋಲಿಸ್ ಠಾಣೆ |
| 13 | ವಾರ್ಡ್ 169 ರ ಸ್ಥಳಿಯ ನಿವಾಸಿಗಳ ಸಂಘ ಮತ್ತು ಸಾರ್ವಜನಿಕರು | |

ವಾರ್ಡ್ ಸಮಿತಿ ಅದ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ ದಿನಾಂಕ 05.09.2022 ರಂದು ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಹಾಗೂ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಮಾಹಿತಿ ಪಡೆದುಕೊಂಡರು.
2. ಭಾರತ ಚುನಾವಣೆ ಆಯೋಗದ ನೀರ್ದೇಶನದಂತೆ ಪ್ರತಿ ವಾರ್ಡ್‌ನ ವಾರ್ಡ್ ಸಮಿತಿ ಸಭೆಯಲ್ಲಿ ಹೊಸದಾಗಿ ಮತದಾರರ ಗುರುತಿನ ಚೀಟಿಯನ್ನು ನೀಡುವುದು, ತಿದ್ದುಪಡಿ ಮಾಡುವುದು, ಸ್ಥಳ ಬದಲಾವಣೆ ಅಥವಾ ವಿಧಾನಸಭಾ ಕ್ಷೇತ್ರ ಬದಲಾವಣೆ ಹಾಗೂ ಮತದಾರರ ಗುರುತಿನ ಚೀಟಿಗೆ ಆಧಾರ್ ಕಾರ್ಡ್ ಜೋಡಣೆ (Link) ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
3. Ovter helpline app ಅಥವಾ nvsp.in (NATIONAL VOTERS SERVICE PORTAL NVSP) ಮೂಲಕ ಸಾರ್ವಜನಿಕರು ಈ ಸೌಲಭ್ಯ ಪಡಿಯಬಹುದಾಗಿದೆ.
   i. ನಮೂನೆ (6)- ಹೊಸದಾಗಿ ಮತದಾರರ ಸೇರ್ಪಡೆ.
   ii. ನಮೂನೆ (7)- ಮತದಾರರ ಪಟ್ಟಿಯಿಂದ ತೆಗೆಯುವುದು.

Scanned with CamScanner

iii. ನಮೂನೆ (8)– ತಿದ್ದುಪಡಿ ಮಾಡುವುದು, ಸ್ಥಳ ಬದಲಾವಣೆ ಅಥವಾ ವಿಧಾನಸಭಾ ಕ್ಷೇತ್ರ ಬದಲಾವಣೆ.

iv. ನಮೂನೆ 6(B)– ಮತದಾರರ ಗುರುತಿನ ಚೀಟಿಗೆ ಆಧಾರ್ ಕಾರ್ಡ ಜೋಡಣೆ (Link) ಮಾಡುವುದು.

4. ಹಳೆಯ ವಾರ್ಡ ಸಂಖ್ಯೆ 169 ರಲ್ಲಿರುವ 10ನೇ ಅಡ್ಡರಸ್ತೆಯಲ್ಲಿ Shoulder drain ಮಾಡಿದ್ದು, ಆದರೆ Shoulder drain ಗಳಿಗೆ Steel Grating ಅಳವಡಿಸಿರುದಿಲ್ಲ ಮತ್ತು ಇನ್ನು ಅನೇಕ ಕಡೆ Shoulder drain ನಿರ್ಮಾಣ ಮಾಡುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWD (South), ಬಿ.ಬಿ.ಎಂ.ಪಿ)**

5. ಹಳೆಯ ವಾರ್ಡ ಸಂಖ್ಯೆ 169 ರಲ್ಲಿರುವ 10ನೇ ಅಡ್ಡರಸ್ತೆಯಲ್ಲಿ Strom water drain (SWD) ಮೇಲೆ ವಾಹನಗಳನ್ನು ಪಾರ್ಕ ಮಾಡುತ್ತಿದ್ದು. ಇದರಿಂದ ಪಾದಚಾರಿ ಮಾರ್ಗದ ಮೇಲೆ ಸಾರ್ವಜನಿಕರು ಓಡಾಡಲು ತುಂಬಾ ತೊಂದರೆಯಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

6. LIC ಕಾಲೋನಿನಲ್ಲಿರುವ 3ನೇ ಅಡ್ಡರಸ್ತೆ ಮತ್ತು 5ನೇ ಅಡ್ಡರಸ್ತೆ ನಲ್ಲಿರುವ ಮರದ ಉದ್ದವಾಗಿರುವ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು. ಸದರಿ ರಸ್ತೆಗಳಲ್ಲಿರುವ ಮರದ ಕೊಂಬೆಗಳನ್ನು ಕತ್ತರಿಸುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

7. ಹಳೆಯ ವಾರ್ಡ ಸಂಖ್ಯೆ 168 ಮತ್ತು 169 ರಲ್ಲಿರುವ ವಾರ್ಡರಲ್ಲಿರುವ ಅನೇಕ ಪಾರ್ಕ್‌ನಲ್ಲಿ ಸೊಳ್ಳೆಗಳು ತುಂಬಾ ಹೆಚ್ಚಾಗಿದ್ದು , ಪಾರ್ಕ್‌ಗಳಲ್ಲಿನ ಸೊಳ್ಳೆಗಳನ್ನು ನಿಯಂತ್ರಿಸಲು ಸೊಳ್ಳೆ ಔಷದಿಯನ್ನು ಸಿಂಪಡಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಆರೋಗ್ಯಾಧಿಕಾರಿಗಳು, ಬಿ.ಬಿ.ಎಂ.ಪಿ ಜಯನಗರ)**

8. LIC ಕಾಲೋನಿನಲ್ಲಿರುವ 5ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆಯಲ್ಲಿ (ಗಣೇಶ ದೇವಸ್ಥಾನ ಹಿಂಭಾಗ) ಕಸದ ಪ್ರಮಾಣ ಹೆಚ್ಚಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWM ಜಯನಗರ, ಬಿ.ಬಿ.ಎಂ.ಪಿ)**

9. ಹಳೆಯ ವಾರ್ಡ–169ರ SBI ಬ್ಯಾಂಕ್ ಹತ್ತಿರದ ಖಾಲಿ ಜಾಗದಲ್ಲಿ ಕಸದ ಪ್ರಮಾಣ ಹೆಚ್ಚಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWM ಜಯನಗರ, ಬಿ.ಬಿ.ಎಂ.ಪಿ)**

10. ವಾರ್ಡನಲ್ಲಿರುವ (ಹಳೆಯ ವಾರ್ಡ–169) ಅನೇಕ ರಸ್ತೆಗಳಿಗೆ ಡಾಂಬರೀಕರಣವಾಗಿದ್ದು. ಇದರಿಂದ ರಸ್ತೆಯಲ್ಲಿರುವ ಮ್ಯಾನ್‌ಹೋಲ್‌ಗಳ ಮಟ್ಟವು ರಸ್ತೆ ಮಟ್ಟಕ್ಕಿಂತ ಕಡಿಮೆ ಇದ್ದು. ಇದರಿಂದ ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದ್ದು ಕೂಡಲೇ ಸಂಬಂಧ ಪಟ್ಟ ಇಲಾಖೆಯವರು ಮ್ಯಾನ್‌ಹೋಲ್‌ಗಳ ಮಟ್ಟವನ್ನು ರಸ್ತೆ ಮಟ್ಟಕ್ಕೆ ಸರಿ ಸಮವಾಗಿ ಸರಿಪಡಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ ಜಯನಗರ ಉಪ–ವಿಭಾಗ, BWSSB)**

11. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿ ಹೊಸದಾಗಿ ಮಳೆ ನೀರಿನ ಇಂಗು ಗುಂಡಿ (Rain water Harvesting pits) ಅನ್ನು ನಿರ್ಮಿಸಲು ಸಭೆಯಲ್ಲಿ ಕೋರಿದರು. **(ತೋಟಗಾರಿಕೆ ಇಲಾಖೆ (ದಕ್ಷಿಣ) ಮತ್ತು ಯೋಜನೆ(ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

Scanned with CamScanner

12. ಹಳೆಯ ವಾರ್ಡ 168 ರ ವ್ಯಾಪ್ತಿಯ 4ನೇ ಟಿ ಬ್ಲಾಕ್‌ನ, 26ನೇ ಮುಖ್ಯರಸ್ತೆಯಲ್ಲಿ ದ್ವಿಚಕ್ರವಾಹಗಳಿಂದ Wheeling, Rash driving ಮಾಡುತ್ತಿದ್ದು. ಇದರಿಂದ ಸಾರ್ವಜನಿಕರಿಗೆ ಸಂಚಾರಕ್ಕೆ ತೊಂದರೆಯಾಗುತಿರುತ್ತದೆ. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಜಯನಗರ ಪೋಲಿಸ್ ಠಾಣೆ & MICO ಲೇಔಟ್, ಸಂಚಾರ ಪೋಲಿಸ್ ಠಾಣೆ)**

13. ಹಳೆಯ ವಾರ್ಡ 168 ರ ವ್ಯಾಪ್ತಿಯ 4ನೇ ಮತ್ತು 4ನೇ ಟಿ ಬ್ಲಾಕ್‌ನ ಮುಖ್ಯರಸ್ತೆ ಅಟ್ಟರಸ್ತೆಗಳಲ್ಲಿ ವಾಹನ ದಟ್ಟನೆ ಹೆಚ್ಚಾಗಿದ್ದು, ವಾಹನ ಪಾರ್ಕಿಂಗ್‌ನಿಂದ ತುಂಬಾ ಟ್ರಾಫೀಕ್ ಸಮಸ್ಯೆಯಾಗುತ್ತಿದ್ದು. ಇದರಿಂದ ಸಾರ್ವಜನಿಕರಿಗೆ ಸಂಚಾರಕ್ಕೆ ತೊಂದರೆಯಾಗುತಿರುತ್ತದೆ. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಜಯನಗರ ಪೋಲಿಸ್ ಠಾಣೆ & MICO ಲೇಔಟ್, ಸಂಚಾರ ಪೋಲಿಸ್ ಠಾಣೆ)**

14. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನ ಮರಗಳಲ್ಲಿರುವ ಒಣಗಿದ ಕೊಂಬೆಗಳು ಮತ್ತು ಮರದ ಉದ್ದವಾಗಿರುವ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು. ಅಂತಹ ಕೊಂಬೆಗಳನ್ನು ಕತ್ತರಿಸಿ ತೆಗೆಯುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

15. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ 37ನೇ ಅಡ್ಡರಸ್ತೆ ಹಾಗೂ 26ನೇ ಮುಖ್ಯರಸ್ತೆಯಲ್ಲಿನ ಮರದ ಉದ್ದವಾಗಿರುವ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು. ಅಂತಹ ಕೊಂಬೆಗಳನ್ನು ಕತ್ತರಿಸಿ ತೆಗೆಯುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

16. ವಾರ್ಡ ಸಂಖ್ಯೆ 168 ರ ವ್ಯಾಪ್ತಿಯ ಬರುವ ಖಾಲಿ ನಿವೇಶನದ ಜಾಗದಲ್ಲಿ ಕಸವನ್ನು ಹಾಕಿ Black spot ಆಗಿ ಪರಿವರ್ತನೆಯಾಗುತ್ತಿದ್ದು. ಸದರಿ ಸ್ವತ್ತಿಗೆ ಸಂಬಂದ ಪಟ್ಟ ಮಾಲೀಕರಿಗೆ ಸೂಚನೆ ನೀಡುವುದು ಹಾಗೂ ನಿವೇಶನ ಜಾಗದ ಸುತ್ತಲು fencing ಅಳವಡಿಸುವಂತೆ ತಿಳಿಸುವುದು. **(ಕಂದಾಯ ಇಲಾಖೆ ಬಿ.ಬಿ.ಎಂ.ಪಿ ಜಯನಗರ ಮತ್ತು ಸ.ಕಾ.ನಿ.ಅ, SWM, ಜಯನಗರ)**

**ನಿರ್ಣಯ:** ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ವರದಿ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಚಂದ್ರಶೇಖರ್.ವಿ)
ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ಸಮಿತಿ ಸಭೆ
ಹೊಸ ವಾರ್ಡ-196 ಬೈರಸಂದ್ರ ( ಹಳೆಯ ವಾರ್ಡ 168 & 169)

1. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ವಲಯ ಆಯುಕ್ತರು (ದಕ್ಷಿಣ), ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ.

Scanned with CamScanner